
# ಮೂರ್ತಿ ಪೂಜೆಯ ಮಹಿಮೆ

ಕಥೆ : ಸ್ವಾಮಿ ವಿಮೂರ್ತಾನಂದ

ಚಿತ್ರ: ಶಿವಪ್ರಸಾದ್




4
ಸ್ವಾಮೀಜಿ ರಾಜನನ್ನು ಭೇಟಿಯಾದರು. ಮಾತುಕತೆಯ ನಡುವೆ ರಾಜನು ಸ್ವಾಮೀಜಿಯವರನ್ನು ಕೇಳಿದ .
ಸ್ವಾಮೀಜಿ, ನೀವು ದೊಡ್ಡ ವಿದ್ವಾಂಸರು. ಸುಲಭವಾಗಿ ನೀವು ಸಾಕಷ್ಟು ಗಳಿಸಬಹುದು. ಆದರೂ ನೀವೇಕೆ ಭಿಕ್ಷೆ ಬೇಡುತ್ತಿರುವಿರಿ?
ರಾಜ, ನೀನೇಕೆ ಪಾಶ್ಚಾತ್ಯರೊಂದಿಗೆ ಸಮಯ ಕಳೆಯುತ್ತಾ, ರಾಜ್ಯದ ಕರ್ತವ್ಯವನ್ನು ಕಡೆಗಣಿಸುತ್ತಿದ್ದೀಯಾ, ಹೇಳು?
5
ಸ್ವಾಮೀಜಿ ಕೇಳಿದ ಮರುಪ್ರಶ್ನೆಯನ್ನು ಕೇಳಿ ಎಲ್ಲರೂ ಅವಾಕ್ಕಾದರು. ರಾಜ ಶಾಂತವಾಗಿ ಉತ್ತರಿಸಿದ...
ಯಾಕೆ ಎಂದು ನಾನು ಹೇಳಲಾರೆ; ಆದರೆ ಈ ರೀತಿಯ ಜೀವನ ನನಗಿಷ್ಟ.
ನಾನೂ ಕೂಡ ಅದೇ ಕಾರಣಕ್ಕಾಗಿ ಭಿಕ್ಷೆ ಬೇಡುತ್ತಾ ಅಲೆದಾಡುತ್ತೇನೆ.
6
ಸ್ವಾಮೀಜಿ, ನನ್ನದೊಂದು ಪ್ರಶ್ನೆ. ನೀವು ಮಾತ್ರ ಇದಕ್ಕೆ ಉತ್ತರ ನೀಡಬಲ್ಲಿರಿ. ನನಗೆ ಮೂರ್ತಿಪೂಜೆಯಲ್ಲಿ ನಂಬಿಕೆಯಿಲ್ಲ. ಮುಂದಿನ ಜನ್ಮದಲ್ಲಿ ನನಗೇನಾಗಬಹುದು?
ಪ್ರತಿಯೊಬ್ಬರೂ ತಮ್ಮ ನಂಬಿಕೆಗೆ ಅನುಗುಣವಾಗಿ ತಮ್ಮ ಆದರ್ಶವನ್ನು ಅನುಸರಿಸಬೇಕು ಎಂದು ನನಗನ್ನಿಸುತ್ತದೆ.
ಸ್ವಾಮೀಜಿಯವರ ಈ ಉತ್ತರದಿಂದ ಎಲ್ಲರೂ ಕಳವಳಗೊಂಡರು. ರಾಜನು ಆಸ್ತಿಕನಾಗುವಂತೆ ಸ್ವಾಮೀಜಿ ಏನನ್ನಾದರೂ ಹೇಳುವರೆಂದು ಎಲ್ಲರೂ ನಿರೀಕ್ಷಿಸಿದ್ದರು.
7
ಆದರೆ ಸ್ವಾಮೀಜಿ ಇನ್ನೂ ಮುಗಿಸಿಲ್ಲ.. ಗೋಡೆಯ ಮೇಲೆ ರಾಜನ ಚಿತ್ರವೊಂದನ್ನು ನೇತು ಹಾಕಿದ್ದುದು ಅವರ ಕಣ್ಣಿಗೆ ಬಿತ್ತು. ಸ್ವಾಮೀಜಿಯವರ ಕೋರಿಕೆಯ ಮೇರೆಗೆ ಆ ಚಿತ್ರವನ್ನು ತೆಗೆಸಿ ಅವರಿಗೆ ಕೊಟ್ಟರು. ಅದನ್ನು ಹಿಡಿದುಕೊಂಡು ಸ್ವಾಮೀಜಿ ಹೇಳಿದರು.
ದಿವಾನ್ ಜಿ, ಇದು ಯಾರ ಚಿತ್ರ ?
ಇದು ನಮ್ಮ ಮಹಾರಾಜನ ಚಿತ್ರ , ಸ್ವಾಮೀಜಿ.
8
ದಿವಾನ್ ಜಿ, ಈ ಚಿತ್ರದ ಮೇಲೆ ಉಗುಳಿರಿ...
ಅವರ ಮಾತನ್ನು ಕೇಳಿ ಎಲ್ಲರೂ ಭಯದಿಂದ ನಡುಗಿಹೋದರು. ರಾಜ ಏನು ಮಾಡುತ್ತಾನೋ ಎಂದು ಅವರಿಗೆ ಭಯವಾಯಿತು.


9
ಆದರೆ ಸ್ವಾಮೀಜಿ ಧೈರ್ಯದಿಂದ ಹೇಳತೊಡಗಿದರು...
ನಿಮ್ಮಲ್ಲಿ ಯಾರು ಬೇಕಾದರೂ ಇದರ ಮೇಲೆ ಉಗುಳಬಹುದು. ಇದು ಒಂದು ಕಾಗದ ಮಾತ್ರವಲ್ಲವೆ? ಆದ ಕಾರಣ ಯಾವುದೇ ಹಿಂಜರಿಕೆಯಿಲ್ಲದೆ ಉಗುಳಿರಿ.
10
ಎಲ್ಲರೂ ದಿಗ್ಭ್ರಮೆಗೊಂಡು ನಿಂತುಬಿಟ್ಟರು, ಯಾರೂ ಹಾಗೆ ಮಾಡಲು ಮುಂದಾಗಲಿಲ್ಲ. ಸ್ವಾಮೀಜಿ ಮತ್ತೂ ಅದನ್ನೇ ಹೇಳಿದಾಗ ದಿವಾನ್ ಹೇಳಿದರು.
ಸ್ವಾಮೀಜಿ, ನೀವು ನಮಗೆ ಏನು ಮಾಡಬೇಕೆಂದು ಹೇಳುತ್ತಿದ್ದೀರಿ? ಮಹಾರಾಜನ ಚಿತ್ರದ ಮೇಲೆ ನಾವು ಹೇಗೆ ಉಗುಳಲು ಸಾಧ್ಯ?
ಆದರೆ ಈ ಚಿತ್ರದಲ್ಲಿ ರಾಜ ಜೀವಂತವಾಗಿ ಇಲ್ಲವಲ್ಲ! ಇದು ಕೇವಲ ಕಾಗದ ಮಾತ್ರವಲ್ಲವೆ?
11
ನೋಡು ಮಹಾರಾಜ, ಇದು ನಿನ್ನ ಚಿತ್ರವಷ್ಟೇ ಆಗಿದ್ದರೂ, ಅದು ಅವರಿಗೆ ನಿನ್ನ ನೆನಪನ್ನು ತರುವುದು. ಆದ್ದರಿಂದ, ಅವರು ನಿನ್ನ ಮೇಲೆ ತೋರಿಸುವಷ್ಟೇ ಭಕ್ತಿ, ಗೌರವಗಳನ್ನು ಈ ಚಿತ್ರದ ಮೇಲೂ ತೋರಿಸುತ್ತಾರೆ.
ನಿಜ, ಸ್ವಾಮೀಜಿ, ಈಗ ನನಗರ್ಥವಾಯಿತು...
12
ಅದೇ ರೀತಿ ದೇವರ ಮೂರ್ತಿಗಳು ಭಕ್ತರಿಗೆ ದೇವರ ನೆನಪನ್ನು ಉಂಟುಮಾಡುವವು. ದೇವರೂ ಕೂಡ ಭಕ್ತನಿಗೆ ಅವನ ನಂಬಿಕೆ, ತಿಳುವಳಿಕೆಗೆ ಅನುಗುಣವಾಗಿ ಪ್ರಕಟಗೊಳ್ಳುವನು.
ವಿನಾಯಕಾಯ ನಮಃ।
ಓಂ ನಮೋ ನಾರಾಯಣಾಯ।


13
ರಾಜ ಕೈಮುಗಿಯುತ್ತಾ ಸ್ವಾಮೀಜಿ ಪಾದಗಳಿಗೆ ನಮಸ್ಕರಿಸಿದ.
ಸ್ವಾಮೀಜಿ, ಇಲ್ಲಿಯವರೆಗೆ ನಾನು ಮೂರ್ತಿಪೂಜೆಯ ಅರ್ಥ ಮತ್ತು ಉದ್ದೇಶ ಏನೆಂದು ಅರ್ಥಮಾಡಿಕೊಂಡಿರಲಿಲ್ಲ. ಭಕ್ತನು ಕೇವಲ ಕಲ್ಲು, ಮರವನ್ನು ಪೂಜಿಸುವುದಿಲ್ಲ; ಅವುಗಳಲ್ಲಿ ಅವನು ದೇವರನ್ನೇ ಕಾಣುತ್ತಾನೆ ಎಂದು ನಾನು ಅರಿತುಕೊಳ್ಳುವಂತೆ ನೀವು ಮಾಡಿದಿರಿ. ನೀವು ನನ್ನ ಕಣ್ಣು ತೆರೆಸಿದಿರಿ. ನನ್ನ ಗತಿ ಏನಾಗುವುದು? ದಯವಿಟ್ಟು ನನ್ನ ಮೇಲೆ ಕರುಣೆ ತೋರಿ.
ರಾಜ, ದೇವರು ಮಾತ್ರವೇ ಎಲ್ಲರ ಮೇಲೂ ಕರುಣೆ ತೋರಬಲ್ಲ. ಅವನು ಯಾವಾಗಲೂ ಕರುಣಾಮಯನಾಗಿರುವನು. ಅವನನ್ನೇ ಪ್ರಾರ್ಥಿಸು. ಅವನು ನಿನ್ನ ಮೇಲೆ ಕರುಣೆ ತೋರುವನು.
14
ಅನಂತರ, ಸ್ವಾಮೀಜಿ ರಾಜನನ್ನು ಬೀಳ್ಕೊಂಡರು.....
ದಿವಾನರೇ, ನಾನು ಎಂದಿಗೂ ಇಂಥ ಮಹಾಪುರುಷರನ್ನು ಭೇಟಿಯಾಗಿಲ್ಲ! ಅವರು ನಮ್ಮೊಂದಿಗೆ ಅರಮನೆಯಲ್ಲೇ ಇದ್ದುಬಿಡುವಂತೆ ಅವರನ್ನು ಕೇಳಿಕೋ.
ಮಹಾರಾಜ, ನಾನೇನೋ ಪ್ರಯತ್ನಿಸುತ್ತೇನೆ. ಆದರೆ ಅವರನ್ನು ಕಟ್ಟಿಹಾಕಲಾಗದು; ಅವರು ಸ್ವತಂತ್ರ ಪ್ರವೃತ್ತಿಯವರು.
15
ಮರುದಿನ ದಿವಾನ ಸ್ವಾಮೀಜಿಯವರನ್ನು ಕೇಳಿಕೊಂಡ...
ದಿವಾನ್ ಜಿ, ನಾನು ನಿಮ್ಮೊಂದಿಗೆ ಇರಬಲ್ಲೆ. ಆದರೆ ಒಂದೇ ಒಂದು ಷರತ್ತು. ಎಲ್ಲ ಬಡವರು, ಅನಕ್ಷರಸ್ಥರು ಕೂಡ ಅವರು ಬಯಸಿದಾಗಲೆಲ್ಲ ನನ್ನನ್ನು ಭೇಟಿಯಾಗಲು ಅವರಿಗೆ ಅನುಮತಿ ನೀಡಬೇಕು.
16
ಸ್ವಾಮೀಜಿ ಅಲ್ಲಿ ಕೆಲವು ದಿನಗಳನ್ನು ಕಳೆದ ನಂತರ ತಮ್ಮ ಪರಿವ್ರಾಜಕ ಜೀವನವನ್ನು ಮುಂದುವರಿಸಿದರು.
''ನೋಡು-ಸ್ವಾಮಿ ವಿವೇಕಾನಂದರು ತಮ್ಮ ತಾಯಿಯ (ಭಾರತದ) ಆತ್ಮದಲ್ಲಿ ಇನ್ನೂ ಜೀವಂತವಾಗಿದ್ದಾರೆ; ಅಂತೆಯೇ ತಮ್ಮ ಮಕ್ಕಳ(ಭಾರತದ ಜನತೆಯ) ಆತ್ಮದಲ್ಲಿ ಇನ್ನೂ ಬದುಕಿದ್ದಾರೆ.''
— ಶ್ರೀ ಅರವಿಂದರು.